KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮಾರ್ಚ್ ೨೪, ೨೦೧೧ (ಚೈತ್ರ ೩, ಶಕ ವರ್ಷ ೧೯೩೨)	ಸಂಚಿಕೆ ೧೨

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್ಆರ್ 2008 (ಸಿ–65) ಬೆಂಗಳೂರು, ದಿನಾಂಕ:07.02.2011

ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 352(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮುಲ್ಕಿ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ:

1) ಶ್ರೀ ಸುನೀಲ್ ಆಳ್ವ, ಬಿನ್ ಶ್ರೀಧರ್ ಆಳ್ವ, ಒಪ್ಪನಾಡುಗುತ್ತು, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ.
2) ಶ್ರೀಮತಿ ಶಾಂತ ಜೆ. ಕೊರೋಡಿಯನ್, ಕೋಂ ಜೆ.ಬಿ. ಕೊರೋಡಿಯನ್, 'ಗುರುಸನ್ನಿತ' ಕೆ.ಎಸ್. ರಾವ್ ನಗರ, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ.
3) ಶ್ರೀ ವಿಠಲ ಬಿನ್ ನಿಂಗಪ್ಪ ಮೊರಟಗಿ, ಮ.ನಂ.19/135, ಲಿಂಗಪ್ಪಯ್ಯ ಕಾಡು, ಬಿಜಾಪುರ ಕಾಲೋನಿ, ಕೆ.ಎಸ್. ರಾವ್ ನಗರ, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.129

ಸಿ.ಆರ್. ರವೀಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 3 ಇಸಂಗ್ರ 2010(2), ಬೆಂಗಳೂರು, ದಿನಾಂಕ: 1ನೇ ಫೆಬ್ರವರಿ, 2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ:29)ರ ಕಲಂ 18–ಎರ ಉಪಕಲಂ (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತೋಟಗಾರಿಕೆ ನಿರ್ದೇಶನಾಲಯ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (through e-Procurement platform) ಸಂಗ್ರಹಿಸತಕ್ಕದ್ದೆಂದು ಕರ್ನಾಟಕ ಸರ್ಕಾರ, ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಸನ್ನ ಕುಮಾರ್ ಜಿ.ಎಸ್.

ಪೀಠಾಧಿಕಾರಿ–1, (ಇ–ಆಡಳಿತ),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 3 EPR 2010(2), Bangalore, Dated:1st February, 2011

In exercise of the powers conferred by sub-section (2) of section 18A of the Karnataka Transparency in Public Procurements Act, 1999 (Karnataka Act 29 of 2000), the Government of Karnataka hereby specify that the Directorate of Horticulture, Bangalore, shall, with immediate effect, procure all its procurements through e-Procurement platform.

By Order and in the name of the Governor of Karnataka,

PRASANNA KUMAR G.S.

Desk Officer-I, (e-Governance),

Department of Personnel and Administrative Reforms.

PR-83

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 3 ಇಸಂಗ್ರ 2010(1), ಬೆಂಗಳೂರು, ದಿನಾಂಕ: 1ನೇ ಫೆಬ್ರವರಿ, 2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ:29)ರ ಕಲಂ 18–ಎರ ಉಪಕಲಂ (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ನಿಯಮಿತ, ಬೆಂಗಳೂರು ಇದರ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (through e-Procurement platform) ಸಂಗ್ರಹಿಸತಕ್ಕದ್ದೆಂದು ಕರ್ನಾಟಕ ಸರ್ಕಾರ, ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಸನ್ನ ಕುಮಾರ್ ಜಿ.ಎಸ್.

ಪೀಠಾಧಿಕಾರಿ–I, (ಇ–ಆಡಳಿತ),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 3 EPR 2010(1), Bangalore, Dated:1st February, 2011

In exercise of the powers conferred by sub-section (2) of section 18A of the Karnataka Transparency in Public Procurements Act, 1999 (Karnataka Act 29 of 2000), the Government of Karnataka hhereby specify that the Karnataka Co-Operative Poultry Federation, Bangalore, shall, with immediate effect, procure all its procurements through e-Procurement platform.

By Order and in the name of the Governor of Karnataka,

PRASANNA KUMAR G.S.

Desk Officer-I, (e-Governance),

Department of Personnel and Administrative Reforms.

PR-82

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 3 ಇಸಂಗ್ರ 2010(3), ಬೆಂಗಳೂರು, ದಿನಾಂಕ: 14ನೇ ಜನವರಿ, 2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ:29)ರ ಕಲಂ 18–ಎರ ಉಪಕಲಂ (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ, ಇದರ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (through e-Procurement platform) ಸಂಗ್ರಹಿಸತಕ್ಕದ್ದೆಂದು ಕರ್ನಾಟಕ ಸರ್ಕಾರ, ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಸನ್ನ ಕುಮಾರ್ ಜಿ.ಎಸ್.

ಪೀಠಾಧಿಕಾರಿ–I, (ಇ–ಆಡಳಿತ),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 3 EPR 2010(3), Bangalore, Dated:14th January, 2011

In exercise of the powers conferred by sub-section (2) of section 18A of the Karnataka Transparency in Public Procurements Act, 1999 (Karnataka Act 29 of 2000), the Government of Karnataka hereby specify that the Karnataka Institute of Medical Sciences, Hubli, shall, with immediate effect, procure all its procurements through e-Procurement platform.

By Order and in the name of the Governor of Karnataka,

PRASANNA KUMAR G.S.

Desk Officer-I, (e-Governance),

Department of Personnel and Administrative Reforms.

PR-47

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 3 ಇಸಂಗ್ರ 2010(2), ಬೆಂಗಳೂರು, ದಿನಾಂಕ: 14ನೇ ಜನವರಿ, 2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ:29)ರ ಕಲಂ 18–ಎರ ಉಪಕಲಂ (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ, ಇದರ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (through e-Procurement platform) ಸಂಗ್ರಹಿಸತಕ್ಕದ್ದೆಂದು ಕರ್ನಾಟಕ ಸರ್ಕಾರ, ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಸನ್ನ ಕುಮಾರ್ ಜಿ.ಎಸ್.

ಪೀಠಾಧಿಕಾರಿ–1, (ಇ–ಆಡಳಿತ),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 3 EPR 2010(2), Bangalore, Dated:14th January, 2011

In exercise of the powers conferred by sub-section (2) of section 18A of the Karnataka Transparency in Public Procurements Act, 1999 (Karnataka Act 29 of 2000), the Government of Karnataka hereby specify that the Karnataka State Women's University, Bijapur, shall, with immediate effect, procure all its procurements through e-Procurement platform.

By Order and in the name of the Governor of Karnataka,

PRASANNA KUMAR G.S.

Desk Officer-I, (e-Governance),

Department of Personnel and Administrative Reforms.

PR-46

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 2 ಎಲ್‌ಡಬ್ಲ್ಯೂಎ 2011, ಬೆಂಗಳೂರು, ದಿನಾಂಕ: 07–02–2011

ಕೆ.ಪಿ.ಟಿ.ಸಿ.ಎಲ್./ಎಸ್ಕಾಂ ಉಪ ಸ್ಥಾವರಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಪಡಿಸುವ ವಿಷಯಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ: 34000/2009 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:23–4–2010 ರಂದು ನೀಡಿರುವ ತೀರ್ಪಿನಲ್ಲಿ ಸರ್ಕಾರದ ಆದೇಶ ದಿನಾಂಕ: 24–1–2006 ಮತ್ತು ಆದೇಶ ಸಂಖ್ಯೆ:ಕಾಇ 135 ಎಲ್‌ಡಬ್ಲ್ಯೂಎ 2009, ದಿನಾಂಕ:2–11–2009 ಗಳನ್ನು ರದ್ದುಪಡಿಸಿದೆ ಹಾಗೂ ಕೆ.ಪಿ.ಟಿ.ಸಿ.ಎಲ್./ಎಸ್ಕಾಂ ಲಿಮಿಟೆಡ್ ವರ್ಕರ್ಸ್ ವೆಲ್ಫೇರ್ ಅಸೋಸಿಯೇಷನ್ [ರಿ] ರವರ ಮನವಿಯನ್ನು ಗುತ್ತಿಗೆ ಕಾರ್ಮಿಕ [ನಿಯಂತ್ರಣ ಮತ್ತು ರದ್ದತಿ] ಕಾಯ್ದೆ 1970ರ ಸೆಕ್ಷನ್ 10ರಡಿ ಪುನರ್ ಪರಿಶೀಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಅರ್ಜಿದಾರರ ಮನವಿಯನ್ನು ಪುನರ್ ಪರಿಶೀಲಿಸಲು ಕಾರ್ಮಿಕ ಮತ್ತು ಆಡಳಿತ ವರ್ಗದವರ ವಿಚಾರಣೆಯನ್ನು ಏರ್ಪಡಿಸಿ ಎರಡೂ ಪಕ್ಷಗಳ ವಾದವನ್ನು ಆಲಿಸಿದ ನಂತರ ಈ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯ ಶಿಫಾರಸ್ಸಿಗಾಗಿ ಕಳುಹಿಸಲಾಗಿತ್ತು. ಮಂಡಳಿಯು ಈ ವಿಷಯದ ಬಗ್ಗೆ ಒಂದು ಉಪ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ನೀಡಿರುವ ವರದಿಯನ್ನು ದಿನಾಂಕ: 7–12–2010 ರಂದು ನಡೆದ ಕರ್ನಾಟಕ ರಾಜ್ಯ ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯ 31ನೇ ಸಭೆಯಲ್ಲಿ ಮಂಡಿಸಿರುತ್ತದೆ. ರಿಟ್ ಅರ್ಜಿ ಸಂಖ್ಯೆ: 34000/2009 ರಲ್ಲಿ ಈ ವ್ಯವಸ್ಥೆಯ ಬಗ್ಗೆ 1970ರ ಗುತ್ತಿಗೆ ಕಾರ್ಮಿಕ [ನಿ ಮತ್ತು ರ] ಕಾಯ್ದೆಯ ಕಲಂ 10ನ್ನು ಅನುಸರಿಸಿ ಸತತವಾಗಿ ನಡೆಯುತ್ತಿರುವ ಕೆಲಸಗಳಿಗೆ ಖಾಯಂ ನೌಕರರನ್ನು ನೇಮಿಸತಕ್ಕದ್ದು ಎಂದು ಹೇಳಿರುವ ಸೂಚನೆಯನ್ನು ಪರಿಗಣಿಸುತ್ತಾ

ಕೆ.ಪಿ.ಟಿ.ಸಿ.ಎಲ್. ನಲ್ಲಿನ ಗುತ್ತಿಗೆ ಕಾರ್ಮಿಕ ಪದ್ದತಿಯು ಹುಸಿ ಗುತ್ತಿಗೆ ಕಾರ್ಮಿಕ ಪದ್ದತಿ [Shaum Contract] ಆಗಿರುವುದರಿಂದ ಕೆ.ಪಿ.ಟಿ.ಸಿ.ಎಲ್./ಎಸ್ಕಾಂನ ವಿದ್ಯುತ್ ಸ್ಥಾವರಗಳಲ್ಲಿ/ಉಪ ಸ್ಥಾವರಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ದತಿಯನ್ನು ರದ್ದುಪಡಿಸಬಹುದು ಎಂಬುದಾಗಿ ಉಪ ಸಮಿತಿಯು ವರದಿ ಮಾಡಿದೆ. ಈ ವರದಿಯ ಬಗ್ಗೆ ಸುದೀರ್ಘವಾಗಿ ಮಂಡಳಿಯ ಸಭೆಯಲ್ಲಿ ಚರ್ಚಿಸಿದ್ದು, 1999ರ ಸೆಪ್ಟೆಂಬರ್ 24 ಮತ್ತು 25 ರಂದು ನಡೆದ ರಾಜ್ಯ ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯ 17ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವು ಸರಿ ಇರುವುದರಿಂದ ಕೆ.ಪಿ.ಟಿ.ಸಿ.ಎಲ್./ಎಸ್ಕಾಂ ಉಪ ಸ್ಥಾವರಗಳಲ್ಲಿನ ಶಿಫ್ಟ್ ಇಂಜಿನಿಯರ್ಸ್/ಆಪರೇಟರ್ಸ್ ವಿಭಾಗದಲ್ಲಿ ಗುತ್ತಿಗೆ ಕಾರ್ಮಿಕ ಪದ್ದತಿಯನ್ನು ರದ್ದುಪಡಿಸಬಹುದು ಎಂಬುದಾಗಿ ತೀರ್ಮಾನಿಸಿ ಅದರಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ರಾಜ್ಯ ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯ 17ನೇ ಸಭೆಯಲ್ಲಿ ಕೆಳಕಂಡಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು.

" The State Contract Labour Advisory Board hereby recommends by majority i.e, 4:3 for abolition of Contract Labour System in Karnataka Electricity Board, in its stations/sub stations/units in Mangalore and Udupi Circles."

ಕರ್ನಾಟಕ ರಾಜ್ಯ ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಗುತ್ತಿಗೆ ಕಾರ್ಮಿಕ [ನಿಯಂತ್ರಣ ಮತ್ತು ರದ್ದತಿ] ಕಾಯಿದೆ 1970ರ ಸೆಕ್ಷನ್ 10[1] ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆ.ಪಿ.ಟಿ.ಸಿ.ಎಲ್./ಎಸ್ಕಾಂ ಉಪ ಸ್ಥಾವರಗಳಲ್ಲಿನ ಶಿಫ್ಟ್ ಇಂಜಿನಿಯರ್ಸ್/ಆಪರೇಟರ್ಸ್ ವಿಭಾಗದಲ್ಲಿ ಗುತ್ತಿಗೆ ಕಾರ್ಮಿಕ ಪದ್ದತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.138

ಎನ್.ಆರ್. ಪ್ರಭು

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 75 ಎಲ್ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 17–02–2011

ಕರ್ನಾಟಕ ರಾಜ್ಯಾದ್ಯಂತ **"ಟೆಕ್ಸ್‌ಟೈಲ್ಸ್ (ಸಿಲ್ಕ್)"** ಉದ್ದಿಮೆಯಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 ರ (ಕೇಂದ್ರಾಧಿನಿಯಮ ಸಂಖ್ಯೆ: XI) ಸೆಕ್ಷನ್ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 2 ತಿಂಗಳ ಅವಧಿಯೊಳಗೆ ಭಾದಿತರಾಗುವ ವ್ಯಕ್ತಿಗಳಿಂದ ಸಲಹೆ/ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಅಥವಾ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29 ಇಲ್ಲಿಗೆ ಸಲ್ಲಿಸಬಹುದಾಗಿರುತ್ತದೆ.

ಕನಿಷ್ಠ ವೇತನ ಕಾಯ್ದೆ, 1948ರ ಸೆಕ್ಷನ್ 3(1)(ಬಿ) ಮತ್ತು 5(1)(ಬಿ)ರಡಿಯಲ್ಲಿ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯಾದ್ಯಾಂತ ಯಾವುದೇ **"ಟೆಕ್ಸ್‌ಟೈಲ್ಸ್ (ಸಿಲ್ಕ್)"** ಉದ್ದಿಮೆಯ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕ ವರ್ಗದವರಿಗೆ ವೇತನವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಪ್ರಸ್ತಾಪಿಸಿದೆ.

ಅನುಸೂಚಿ

ಕ್ರ. ಸಂ.	ಕೆಲಸದ ವರ್ಗಗಳು	ಕನಿಷ್ಠ ವೇತನ ದರಗಳು ಪ್ರತಿ ದಿನಕ್ಕೆ [ರೂಪಾಯಿಗಳಲ್ಲಿ]
1	2	3
ಗ್ರೂಪ್ 1 ಸಿಲ್ಕ್ ಚರಕ ಮತ್ತು ಸಿಲ್ಕ್ ಫಿಲೇಚರ್ ಎಸ್ಟಾಬ್ಲಿಷ್‌ಮೆಂಟ್		
I	ಎ	161–07
1	ಕಕೂನ್ ಸಾರ್ಟರ್ಸ್	
2	ಕುಕ್ಕರ್ಸ್	
3	ರೀಲರ್ಸ್	
4	ಚರಕ ಟರ್ನರ್ಸ್	
5	ಸ್ಪಿನ್ನರ್ಸ್	
6	ಸಿಲ್ಕ್‌ವೇಸ್ಟ್ ಕ್ಲೀನರ್ಸ್	
7	ಸಿಲ್ಕ್ ಪ್ಯಾಕರ್ಸ್	
8	ಹ್ಯಾಂಕ್ ಮೇಕರ್ಸ್	

ಕ್ರ. ಸಂ.	ಕೆಲಸದ ವರ್ಗಗಳು	ಕನಿಷ್ಠ ವೇತನ ದರಗಳು ಪ್ರತಿ ದಿನಕ್ಕೆ [ರೂಪಾಯಿಗಳಲ್ಲಿ]
1	2	3
9	ಕ್ರೈಯರ್ಸ್	
10	ವೇಸ್ಟ್ ಪಿಕ್ಕರ್ಸ್	
11	ತೂಕ ಮಾಡುವವರು	
12	ಆಯಿಲ್ ಫಿಲ್ಲರ್ಸ್	
13	ಡ್ರಾಫ್ಟ್ ಪಿಕ್ಕರ್ಸ್	
14	ಬಂಡ್ಲರಸ್ ಮತ್ತು ಪ್ಯಾಕರ್ಸ್	
I	ಬಿ	
1	ಚರಕ ರೀಲರ್ಸ್	
2	ಫೈರ್‌ಮ್ಯಾನ್ (ಚಾರ್ಟಮನ್)	
3	ರೀಲರ್ಸ್	
4	ಟ್ವಿಸ್ಟರ್	
5	ಗಿಲ್ ರೋವಿಂಗ್ ಟೆಂಡರ್ಸ್	171–57
6	ರಿಂಗ್ ಫ್ರೇಂ ಬಾಯ್ಸ್	
7	ಬ್ಯಾಂಡರ್ಸ್	
8	ಗ್ಯಾಸ್ ಪಿನ್ನರ್ಸ್	
9	ಸಾಯ್ಲಿಂಗ್ ಸ್ಪಿನ್ನಿಂಗ್ ಬಾಯ್ಸ್	
10	ಕೊಂಬ್ ಸ್ಪಿನ್ನರ್ಸ್	
I	ಸಿ	
1	ಪ್ರೆಸ್ಟರ್ಸ್	
2	ಗ್ಯಾಸ್‌ರ್ಸ್	173–67
3	ಗ್ಯಾಸ್ ಪ್ಲಾಂಟ್ ಅಟೆಂಡರ್	
	ಗ್ರೂಪ್ 2. ಟ್ವಿಸ್ಟಿಂಗ್ ಸೆಕ್ಷನ್ (ಪ್ಯೂರ್ ಸಿಲ್ಕ್ ಅಂಡ್ ಆರ್ಟ ಸಿಲ್ಕ್)	
II	ಎ	
1	ವೈಂಡರ್ಸ್	
2	ಟ್ವಿಸ್ಟರ್ಸ್	161–07
3	ಡಬ್ಲರ್ಸ್	
4	ರೀಲರ್ಸ್	
II	ಬಿ	
1	ವಾರ್ಪರ್ಸ್	171–57
2	ಟ್ವಿಸ್ಟಿಂಗ್ ಅಸಿಸ್ಟೆಂಟ್	
	ಗ್ರೂಪ್ 3. ವೀವಿಂಗ್ ಕ್ಯಾಲೆಂಡರಿಂಗ್ ಮತ್ತು ಪ್ರೋಸೆಸಿಂಗ್	
III	ಎ	
1	ಪರ್ನ್ ವೈಂಡರ್	
2	ವಾರ್ಪ ಸಹಾಯಕರು	
3	ಕಾರ್ಡ್ ಪಂಚರ್ಸ್	
4	ಕಾರ್ಡ್ ಲೇಸರ್ಸ್	
5	ಬ್ಯಾಕ್ ಸೀಜರ್ಸ್	
6	ಬಟ್ಟೆ ಪರಿವೀಕ್ಷಕರು	
7	ಹ್ಯಾಂಡ್ ಮತ್ತು ಮಿಷನ್ ಫೋಲ್ಡರ್	161–07
8	ಬ್ಯಾಕ್ ಕ್ಯಾಲೆಂಡರ್ ಮ್ಯಾನ್	
9	ಹ್ಯಾಂಡ್ ಸೀವರ್ ಸ್ಟಿಚ್ಚರ್ ಮಾರ್ಕರ್, ಬಂಡ್ಲರ್ ಪ್ರಿಂಟರ್	

ಕ್ರ. ಸಂ.	ಕೆಲಸದ ವರ್ಗಗಳು	ಕನಿಷ್ಠ ವೇತನ ದರಗಳು ಪ್ರತಿ ದಿನಕ್ಕೆ [ರೂಪಾಯಿಗಳಲ್ಲಿ]
1	**2**	**3**
10	ಹ್ಯಾಂಡ್ ಐರನಿಂಗ್ ಮ್ಯಾನ್	
11	ಮಿಷನ್ ಮ್ಯಾನ್ ಸಹಾಯಕರು	
12	ಸೋಪಿಂಗ್ ಮಿಷನ್ ಮ್ಯಾನ್	
13	ಪಿಂಚ್ ಮ್ಯಾನ್, ಕಿರ್‌ಮ್ಯಾನ್, ಸ್ವಂಟರ್ ಮಿಷನ್‌ಮ್ಯನ್, ವಾಷಿಂಗ್‌ಮ್ಯಾನ್, ಬ್ಲೀಚಿಂಗ್ ಮ್ಯಾನ್, ಹೈಡ್ರೋ ಎಕ್ಸ್‌ಟ್ರಾಕ್ಟರ್ ಮೆಷಿನ್‌ಮ್ಯಾನ್	
III	ಬಿ	171–57
1	ಫ್ರಾಂಟ್ ಕ್ಯಾಲೆಂಡರ್ ಮ್ಯಾನ್	
2	ಡೆವೆಲಪ್‌ಮೆಂಟ್ ಮ್ಯಾನ್, ಎಡಿಟಿಂಗ್ ಮ್ಯಾನ್	
3	ಕಾಂಟ್ರಾಸ್ಟ್ ಪಲ್ಲು ಪ್ರಿಪರೇಟರ್ಸ್ ಮತ್ತು ಡೈಯರ್ಸ್	
III	ಸಿ	172–62
1	ಹೈಸ್ಪೀಡ್ ವಾರ್ಪರ್ಸ್	
2	ಡಿಸೈನರ್	
3	ಸಾರ್ಟನ್ ಅಥವಾ ಪೀಸರ್ಸ್	
4	ಲೇಸ್ ವಾರ್ಪರ್ಸ್	
5	ವೀವರ್ಸ್ ಪ್ಲೇನ್ ಕಾರ್ಪಟ್ ವೀವರ್ಸ್	
6	ಫಿನಿಶರ್ಸ್	
7	ಪ್ರಿಂಟಿಂಗ್ ಮಿಷಿನ್ ಮ್ಯಾನ್	
III	ಡಿ	**221–97**
1	ಹೆಡ್ ಡಿಸೈನರ್	
2	ವೀವರ್ಸ್ ಡಾಬಿ ವಿತ್ ಡ್ರಾಪ್ ಬಾಕ್ಸ್	
III	ಇ	**222–54**
1	ವೀವರ್ಸ್ (ಜೆಕಾರ್ಡ್)	
III	**ಎಫ್**	**238–77**
1	ಇತರೆ ಫ್ಯಾನ್ಸಿ ವೀವರ್ಸ್	
	ಗ್ರೂಪ್ 4. ಮೇನ್‌ಟೆನೆನ್ಸ್ ಸೆಕ್ಷನ್ (ಪವರ್ ಪ್ಲಾಂಟ್ ಅಂಡ್ ವರ್ಕ್‌ಶಾಪ್)	
IV.	ಎ	171–57
1	ಆಯಿಲ್‌ಮ್ಯಾನ್	
2	ಫೈಯರ್ ಮ್ಯಾನ್	
3	ಲಾರಿ ಕ್ಲೀನರ್	
4	ಪಂಪ್ ಮ್ಯಾನ್	
5	ಕಾಬ್ಲರ್	
IV.	ಬಿ	176–82
1	ವೈರ್‌ಮ್ಯಾನ್, ಫಿಟ್ಟರ್, ಬ್ಲಾಕ್‌ಸ್ಮಿತ್	
2	ಟರ್ನರ್	
3	ಶೇಪರ್ಸ್	
4	ಪ್ಲಂಬರ್	
5	ಬಾಯ್ಲರ್ ಅಟೆಂಡರ್	
6	ಕಾಪೆಂಟರ್	
7	ಮೆಕ್ಯಾನಿಕ್	
8	ವೆಲ್ಡರ್	
9	ಇಂಜಿನ್ ಡ್ರೈವರ್	

ಕ್ರ. ಸಂ.	ಕೆಲಸದ ವರ್ಗಗಳು	ಕನಿಷ್ಠ ವೇತನ ದರಗಳು ಪ್ರತಿ ದಿನಕ್ಕೆ [ರೂಪಾಯಿಗಳಲ್ಲಿ]
1	**2**	**3**
10	ಎಲೆಕ್ಟ್ರೀಷಿಯನ್	
11	ಲಾರಿ ಡ್ರೈವರ್	
12	ಮೆಕ್ಯಾನಿಕಲ್ ಫೋರ್‌ಮ್ಯಾನ್	
13	ಮೇಸನ್	
	ಗ್ರೂಪ್ 5. ಸಾಮಾನ್ಯ ಆಡಳಿತ ವಿಭಾಗ (ಗುಮಾಸ್ತ ಹಾಗೂ ಮೇಲ್ವಿಚಾರಕರು)	
V	**ಎ**	
1	ಮಜ್ದೂರ್, ಜವಾನ, ಕಾವಲುಗಾರ, ಮಾಲಿ, ಕಸ ಗುಡಿಸುವವರು ವಾಟರ್ ಮ್ಯಾನ್	161–07
2	ಅಸಿಸ್ಟೆಂಟ್	
V	**ಬಿ**	171–57
1	ಟೈಂ ಕೀಪರ್	
V	**ಸಿ**	176–82
1	ಉಗ್ರಾಣ ನಿರ್ವಾಹಕ	
V	**ಡಿ**	
1	ಮೇಸ್ತ್ರೀ, ಸೂಪರ್‌ವೈಸರ್, ಜಾಬರ್	
2	ಗುಮಾಸ್ತ	176–82
3	ಬೆರಳಚ್ಚುಗಾರ	
4	ಕ್ಯಾಷಿಯರ್	
V	**ಇ**	
1	ಸಹಾಯಕ ಮ್ಯಾನೇಜರ್	221–97
2	ಅಕೌಂಟೆಂಟ್	
V	**ಎಫ್**	216–19
1	ಮಾಸ್ಟರ್	
2	ಮ್ಯಾನೇಜರ್	

ತುಟ್ಟಿಭತ್ಯೆ:

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2010 ರಿಂದ ಡಿಸೆಂಬರ್ 2010)ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:

ಅ) ಮಾಸಿಕ ವೇತನವನ್ನು ಪಡೆಯುವವರು:–

ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು= ತುಟ್ಟಿಭತ್ಯೆ

ಆ) ದಿನಗೂಲಿ ವೇತನ ಪಡೆಯುವವರು :–

ಪ್ರತಿ ವರ್ಷ ಹೆಚ್ಚಾಗುವ ಅಂಶಗಳು X ತುಟ್ಟಿಭತ್ಯೆಯ ದರ X 30 = ತುಟ್ಟಿಭತ್ಯೆ

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.
7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
8. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.
9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.152

ಎನ್.ಆರ್. ಪ್ರಭು

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 3 ಇಸಂಗ್ರ 2010(1), ಬೆಂಗಳೂರು, ದಿನಾಂಕ:14ನೇ ಜನವರಿ, 2011

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ: 29) ರ ಕಲಂ 18–ಎರ ಉಪಕಲಂ (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು ಇವರ ಕಛೇರಿಯ ಎಲ್ಲಾ ಸಂಗ್ರಹಣೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (through e-Procurement platform) ಸಂಗ್ರಹಿಸತಕ್ಕದೆಂದು ಕರ್ನಾಟಕ ಸರ್ಕಾರ, ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಶಾಂತ್‌ಕುಮಾರ್ ಎಸ್.ಬಿ.

ಪೀಠಾಧಿಕಾರಿ–1, (ಇ–ಆಡಳಿತ),

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 3 EPR 2010(1), Bangalore, Dated:14th January, 2011

In exercise of the powers conferred by sub-section (2) of section 18A of the Karnataka Transparency in Public Procurements Act, 1999 (Karnataka Act 29 of 2000), the Government of Karnataka hereby specify that the Office of the Deputy Commissioner, Mysore District, Mysore, shall, with immediate effect, procure all its procurements through e-Procurement platform.

By Order and in the name of the Governor of Karnataka,

PRASHANTKUMAR S.B.

PR-45

Desk Officer-1, (e-Governance)

Department of Personnel and Administrative Reforms.

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 65 ಎಲ್ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 14–02–2011

ಕರ್ನಾಟಕ ರಾಜ್ಯಾದ್ಯಂತ "ಏಲಕ್ಕಿ ಮಲೈಗಳು ಮತ್ತು ಏಲಕ್ಕಿ ತೋಟ" ಉದ್ದಿಮೆಯಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಟ ವೇತನವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಕನಿಷ್ಟ ವೇತನ ಕಾಯ್ದೆ 1948ರ (ಕೇಂದ್ರಾಧಿನಿಯಮ ಸಂಖ್ಯೆ: XI) ಸೆಕ್ಷನ್ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 2 ತಿಂಗಳ ಅವಧಿಯೊಳಗೆ ಭಾದಿತರಾಗುವ ವ್ಯಕ್ತಿಗಳಿಂದ ಸಲಹೆ/ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಸಲಹೆ/ಆಕ್ಷೇಪಣೆಗಳೇನಾದರು ಇದ್ದಲ್ಲಿ ಅದನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಇಲ್ಲವೇ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29 ಇಲ್ಲಿಗೆ ಸಲ್ಲಿಸಬಹುದಾಗಿರುತ್ತದೆ.

ಕನಿಷ್ಟ ವೇತನ ಕಾಯ್ದೆ 1948ರ ಸೆಕ್ಷನ್ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯಾದ್ಯಾಂತ ಯಾವುದೇ **"ಏಲಕ್ಕಿ ಮಲೈಗಳು ಮತ್ತು ಏಲಕ್ಕಿ ತೋಟ"** ಉದ್ದಿಮೆಯಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕ ವರ್ಗದವರಿಗೆ ವೇತನವನ್ನು ಪರಿಷ್ಕರಿಸಲು ಪ್ರಸ್ತಾಪಿಸಿದೆ.

ಅನುಸೂಚಿ

ಕ್ರ. ಸಂ	ಕೆಲಸದ ವರ್ಗಗಳು	ಕನಿಷ್ಠ ವೇತನ ಪ್ರತಿ ದಿನಕ್ಕೆ	ಕನಿಷ್ಠ ವೇತನ ಪ್ರತಿ ತಿಂಗಳಿಗೆ
		ರೂಪಾಯಿಗಳಲ್ಲಿ	
1	ವಯಸ್ಕರು	139–80	–
2	ಅರೆ ವಯಸ್ಕರು	121–64	–
3	ಮೇಲ್ವಿಚಾರಕರು	–	4,158–73

ತುಟ್ಟಿಭತ್ಯೆ:

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿಭತ್ಯೆ ನೀಡತಕ್ಕದ್ದು.

ಜೀವನ ನಿರ್ವಹಣಾ ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2010 ರಿಂದ ಡಿಸೆಂಬರ್ 2010)ರ ಸರಾಸರಿ ಆಧಾರದ ಮೇಲೆ 2011 ಎಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ವೇತನದ ಮಾಸಿಕ ದರಗಳನ್ನು 26 ದಿನಗಳಿಂದ ವಿಭಾಗಿಸಿ, ನಾಲ್ಕು ರಜಾ ದಿನಗಳಿಗಾಗಿ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:

ಅ] ಮಾಸಿಕ ವೇತನವನ್ನು ಪಡೆಯುವವರು:–

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು = ತುಟ್ಟಿಭತ್ಯೆ.

ಆ] ದಿನಗೂಲಿ ವೇತನ ಪಡೆಯುವವರು:–

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು = ತುಟ್ಟಿಭತ್ಯೆ.
26

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.
7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.
9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಪ್ರಭು

ಪಿ.ಆರ್.153

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಗ್ರಾಅಪ.06.ಆರ್‌ಬಿಎಲ್.2009, ಬೆಂಗಳೂರು, ದಿನಾಂಕ: 11-02-2011

ಜೀತಗಾರಿಕೆ ಪದ್ದತಿ (ನಿರ್ಮೂಲನಾ) ಕಾಯ್ದೆ 1976ರ (1976ರ ಕೇಂದ್ರ ಕಾಯ್ದೆ ಸಂಖ್ಯೆ 19) ಪ್ರಕರಣ ಸಂಖ್ಯೆ 13ರ ಉಪಪ್ರಕರಣ (1),(2) ಮತ್ತು (3)ರ ಅಡಿಯಲ್ಲಿ ದತ್ತವಾದ ಅಧಿಕಾರದನ್ವಯ ಹಾಗೂ ಸದರಿ ವಿಚಾರದಲ್ಲಿ ಈ ಹಿಂದೆ ಹೊರಡಿಸಲಾಗಿದ್ದ ಎಲ್ಲಾ ಆದೇಶಗಳನ್ನು ಹಿಂತೆಗೆದು ಕೊಂಡು ಕರ್ನಾಟಕ ರಾಜ್ಯ ಸರ್ಕಾರವು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮತ್ತು ಉಪವಿಭಾಗ ಮಟ್ಟದಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಾಗೃತ ಸಮಿತಿಯನ್ನು ಈ ಮೂಲಕ ರಚಿಸಿದೆ.

ಜಿಲ್ಲಾ ಮಟ್ಟದ ಜಾಗೃತ ಸಮಿತಿ – ಉತ್ತರ ಕನ್ನಡ

1	ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿ, ಕಾರವಾರ	ಅಧ್ಯಕ್ಷರು
2	ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಕಾರವಾರ	ಸದಸ್ಯರು
3	ಜಿಲ್ಲಾ ಆರಕ್ಷಕ ಅಧೀಕ್ಷಕರು, ಕಾರವಾರ	ಸದಸ್ಯರು
4	ವ್ಯವಸ್ಥಾಪಕರು, ಲೀಡ ಬ್ಯಾಂಕ್, ಕಾರವಾರ	ಸದಸ್ಯರು
5	ಜಿಲ್ಲಾ ಕಾರ್ಮಿಕ ಅಧಿಕಾರಿ, ಕಾರವಾರ	ಸದಸ್ಯರು
6	ಉಪನಿರ್ದೇಶಕರು ರೇಷ್ಮೆ ಇಲಾಖೆ, ಶಿರಸಿ, ಉತ್ತರ ಕನ್ನಡ	ಸದಸ್ಯರು
7	ಉಪ ನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕಾರವಾರ,	ಸದಸ್ಯರು
8	ಶ್ರೀಮತಿ ನಯನಾ ನಂದನ ನೀಲಾವರ, ಕಾರವಾರ.	ಸದಸ್ಯರು
9	ಶ್ರೀ ನರಹರಿ ರಘುವೀರ್ ಬೋರಕರ್, ಕಾರವಾರ.	ಸದಸ್ಯರು
10	ಶ್ರೀ ರತನ ಥಾಕು ದುರ್ಗೇಕರ್, ಕಾರವಾರ.	ಸದಸ್ಯರು
11	ಶ್ರೀ ದೀಪಕ ಕುಮಾರ ಪುರುಷೋತ್ತಮ ಶೆಣ್ವಿ, ಕಾರವಾರ	ಸದಸ್ಯರು
12	ಶ್ರೀಮತಿ ಸುರೇಖಾ ಫಾಯದೇ, ಅಧ್ಯಕ್ಷರು, ಮಹಿಳಾ ಮಂಡಳ, ಕಾರವಾರ	ಸದಸ್ಯರು
13	ಶ್ರೀ ಗಜಾ ಕೃಷ್ಣ ಸುರಂಗೇಕರ್, ಕಾರವಾರ.	ಸದಸ್ಯರು
14	ಶ್ರೀಮತಿ ಕುಂದಾ ರಾಮನಾಥ ಪೂಜಾರಿ, ಕಾರವಾರ	ಸದಸ್ಯರು
15	ಕೇಂದ್ರ ಕಛೇರಿ ಸಹಾಯಕರು, ಜಿಲ್ಲಾಧಿಕಾರಿ ಕಛೇರಿ, ಕಾರವಾರ	ಸಂಚಾಲಕರು

ಉಪವಿಭಾಗಮಟ್ಟದ ಜಾಗೃತ ಸಮಿತಿ – ಕಾರವಾರ

1	ಉಪವಿಭಾಗಾಧಿಕಾರಿ ಮತ್ತು ಉಪವಿಭಾಗೀಯ ದಂಡಾಧಿಕಾರಿ ಕಾರವಾರ ಉಪವಿಭಾಗ ಉತ್ತರ ಕನ್ನಡ	ಅಧ್ಯಕ್ಷರು
2	ಶ್ರೀಮತಿ ಪಾರ್ವತಿ ತಪ್ಪಣ್ಣ ಬುಳ್ಳಣ್ಣನವರ ಸಾ: ಕೇರವಾಡ, ದಾಂಡೇಲಿ	ಸದಸ್ಯರು
3	ಶ್ರೀ ದೀಪಕ ಭಾಸ್ಕರ ಕುಡಾಲಕರ, ಸಾ: ಪಿ.ಎನ್.ಟಿ.ಕ್ವಾರ್ಟರ್ಸ್, ಸೋನಾರವಾಡ, ಕಾರವಾರ	ಸದಸ್ಯರು
4	ಶ್ರೀ ಅಶೋಕ ರಾಮ ಹಳದನಕರ, ಸಾ: ಸೆಲವಾಡಾ, ತಾ: ಜೋಯಿಡಾ	ಸದಸ್ಯರು
5	ಶ್ರೀಮತಿ ದೇವಕಿ ಆ ನಾಯ್ಕ, ಸಾ: ಕೆಎಚ್‌ಬಿ ಕಾಲೋನಿ, ಗಣೇಶ ಕ್ರಾಸ್ ಹತ್ತಿರ, ಅಂಬೇವಾಡಿ ದಾಂಡೇಲಿ, ತಾ: ಹಳಿಯಾಳ	ಸದಸ್ಯರು
6	ಶ್ರೀ ಪಾಲ್ಲೊ ದಂಡೂರ ಪರವಾರ ಸಾ: ಸಾಂತೇರಿ ವಿದ್ಯಾಲಯ ಹತ್ತಿರ, ಹಣಕೋಣ, ತಾ: ಕಾರವಾರ	ಸದಸ್ಯರು
7	ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್, ಕಾರವಾರ	ಸದಸ್ಯರು
8	ಶ್ರೀಮತಿ ಪಲ್ಲವಿ ಪಂಡಿತ್‌ನಾಯ್ಕ, ಯುವತಿ ಮಂಡಲ, ಜೋಯಿಡಾ	ಸದಸ್ಯರು
9	ಶ್ರೀ ನಾರಾಯಣ ಮೇತ್ರಿ ಆಶಾಕಿರಣ ತಾ: ತೆರಗಾಏವ, ಹಳಿಯಾಳ	ಸದಸ್ಯರು
10	ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಕಾರವಾರ	ಸದಸ್ಯರು
11	ಆರಕ್ಷಕ ಉಪಾಧೀಕ್ಷಕರು, ಕಾರವಾರ ಉಪವಿಭಾಗ, ಕಾರವಾರ	ಸದಸ್ಯರು
12	ಕಾರ್ಮಿಕ ಅಧಿಕಾರಿ, ಕಾರವಾರ ಉಪವಿಭಾಗ, ಕಾರವಾರ	ಸದಸ್ಯರು
13	ಹಿರಿಯ ರೇಷ್ಮೆ ನಿರೀಕ್ಷಕರು, ರೇಷ್ಮೆ ಇಲಾಖೆ, ಜೋಯಿಡಾ ಉಪವಿಭಾಗ, ಕಾರವಾರ	ಸದಸ್ಯರು
14	ಉಪ ನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕಾರವಾರ, ಪ್ರತಿನಿಧಿ (ಸಹಾಯಕ ಭೂವಿಜ್ಞಾನಿ), ಕಾರವಾರ ಉಪವಿಭಾಗ, ಉತ್ತರ ಕನ್ನಡ	ಸದಸ್ಯರು
15	ತಹಶೀಲ್ದಾರ್ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿ, ಕಾರವಾರ	ಸಂಚಾಲಕರು

ಉಪವಿಭಾಗಮಟ್ಟದ ಜಾಗೃತ ಸಮಿತಿ – ಕುಮಟಾ

1	ಉಪವಿಭಾಗಾಧಿಕಾರಿ ಮತ್ತು ಉಪವಿಭಾಗೀಯ ದಂಡಾಧಿಕಾರಿ, ಕುಮಟಾ ಉಪವಿಭಾಗ, ಉತ್ತರ ಕನ್ನಡ	ಅಧ್ಯಕ್ಷರು
2	ಶ್ರೀ ಕೃಷ್ಣಾ ರಾಮಾ ನಾಯ್ಕ ಧಾರೇಶ್ವರ, ಕಡೆಕೋಡಿ	ಸದಸ್ಯರು
3	ಶ್ರೀ ಶ್ರೀಕಾಂತ ಎಸ್.ಭಟ್ ಹಲಗೆ ಕೋಜೊಳ್ಳಿ	ಸದಸ್ಯರು
4	ಶ್ರೀ ದಯಾನಂದ ವೆಂಕರಮಣ ನಾಯ್ಕ, ಕೋಡ್ಕಣಿ	ಸದಸ್ಯರು
5	ಶ್ರೀ ಮಾದೇವ ಬಲಿಯಾ ಮುಕ್ತಿಮನೆ ಕತಗಾಲ್	ಸದಸ್ಯರು
6	ಶ್ರೀ ನಾರಾಯಣ ಕರಿಯಾ ಮುಕ್ತಿ ಹಂದಿಗೋಣ	ಸದಸ್ಯರು
7	ಶ್ರೀ ಗಣೇಶ್ ಜಯಂತ ಹಳಕಾರ್ ಕುಮಟಾ	ಸದಸ್ಯರು
8	ಶ್ರೀ ಕಸ್ತೂರಿಬಾ ಸ್ವಸಹಾಯ ಸಂಘ ದಿವಗಿ	ಸದಸ್ಯರು
9	ನವಜೀವನ ಜೈನಾವು, ಕುಮಟಾ	ಸದಸ್ಯರು
10	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಮಟಾ	ಸದಸ್ಯರು
11	ಆರಕ್ಷಕ ಉಪ ನಿರೀಕ್ಷಕರು, ಭಟ್ಕಳ ಕುಮುಟಾ ಉಪವಿಭಾಗ	ಸದಸ್ಯರು
12	ಕಾರ್ಮಿಕ ಅಧಿಕಾರಿ, ಕುಮುಟಾ ಉಪವಿಭಾಗ	ಸದಸ್ಯರು
13	ರೇಷ್ಮೆ ಅಧಿಕಾರಿ, ಅಂಕೋಲಾ ಕುಮಟಾ ಉಪವಿಭಾಗ	ಸದಸ್ಯರು
14	ಉಪನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕಾರವಾರ, ಪ್ರತಿನಿಧಿ (ಸಹಾಯಕ ಭೂವಿಜ್ಞಾನಿ) ಕುಮಟಾ ಉಪವಿಭಾಗ	ಸದಸ್ಯರು
15	ತಹಶೀಲ್ದಾರ್ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿ ಕುಮಟಾ ತಾಲ್ಲೂಕು, ಕುಮುಟಾ	ಸಂಚಾಲಕರು

ಉಪವಿಭಾಗಮಟ್ಟದ ಜಾಗೃತ ಸಮಿತಿ – ಭಟ್ಕಳ

1	ಉಪವಿಭಾಗಾಧಿಕಾರಿ ಮತ್ತು ಉಪವಿಭಾಗೀಯ ದಂಡಾಧಿಕಾರಿ	ಅಧ್ಯಕ್ಷರು
2	ಶ್ರೀ ಸಚಿನ್ ಜಗನ್ನಾಥ ಮಹಾಲೆ ವಿ.ಟಿ.ರೋಡ್, ಸೋನಾರ್‌ಕೇರಿ	ಸದಸ್ಯರು
3	ಶ್ರೀ ಸುಧಾಕರ್ ವಾಸುದೇವ್ ನಾಯ್ಕ ರಘುನಾಥ ರೋಡ್	ಸದಸ್ಯರು
4	ಶ್ರೀ ಕೃಷ್ಣ ವೆಂಕಟಯ್ಯ ಮೊಗೇರ್ ಹೊನ್ನೆಗದ್ದೆ ಹೋಬಳಿ	ಸದಸ್ಯರು

5	ಶ್ರೀಮತಿ ಹೇಮಾ ಗಣಪತಿ ಮೋಗೇರ್ ಮೋಗೇರ್‌ಕೇರಿ, ಶಿರಾಲಿ	ಸದಸ್ಯರು
6	ಶ್ರೀ ಮಹಾದೇವ ಗೋವಿಂದ ಆಗೇರ್ ಅಳ್ವೇಕೋಡಿ	ಸದಸ್ಯರು
7	ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್ ಭಟ್ಕಳ	ಸದಸ್ಯರು
8	ಶ್ರೀಮತಿ ಶೀತಲ ಗಾಂಧಿ, ಸ್ತ್ರೀ ಶಕ್ತಿ ಸಂಘ ಸಾ: ಮಾರುತಿನಗರ, ತಾ: ಭಟ್ಕಳ	ಸದಸ್ಯರು
9	ಶ್ರೀ ನಾರಾಯಣ ರಾಮಾನಾಯ್ಕ ಹರಕಲಿ, ಶಿರಾಲಿ	ಸದಸ್ಯರು
10	ಶ್ರೀ ಅಶ್ವದ್ಧೆಶ್ವರಿ ಸ್ವಸಹಾಯ ಸಂಘ, ಶಿರಾಲಿ	ಸದಸ್ಯರು
11	ಆರಕ್ಷಕ ಉಪ ನಿರೀಕ್ಷಕರು ಭಟ್ಕಳ ಉಪವಿಭಾಗ, ಭಟ್ಕಳ	ಸದಸ್ಯರು
12	ಕಾರ್ಮಿಕ ಅಧಿಕಾರಿ, ಭಟ್ಕಳ ಉಪವಿಭಾಗ, ಭಟ್ಕಳ	ಸದಸ್ಯರು
13	ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ, ಹೊನ್ನಾವರ ಭಟ್ಕಳ ಉಪವಿಭಾಗ,	ಸದಸ್ಯರು
14	ಉಪನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕಾರವಾರ, ಪ್ರತಿನಿಧಿ (ಸಹಾಯಕ ಭೂವಿಜ್ಞಾನಿ) ಭಟ್ಕಳ ಉಪವಿಭಾಗ	ಸದಸ್ಯರು
15	ತಹಶೀಲ್ದಾರ್ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿ ಭಟ್ಕಳ ತಾಲ್ಲೂಕು	ಸಂಚಾಲಕರು

ಉಪವಿಭಾಗಮಟ್ಟದ ಜಾಗೃತ ಸಮಿತಿ – ಶಿರಸಿ

1	ಉಪವಿಭಾಗಾಧಿಕಾರಿ ಮತ್ತು ಉಪವಿಭಾಗೀಯ ದಂಡಾಧಿಕಾರಿ ಶಿರಸಿ ಉಪವಿಭಾಗ	ಅಧ್ಯಕ್ಷರು
2	ಶ್ರೀ ರಾಜಾನಂದ ದೇಶಳ್ಳಿ ಗಣೇಶ ನಗರ, ಶಿರಸಿ	ಸದಸ್ಯರು
3	ಶ್ರೀ ನಾರಾಯಣ ಮರಾಠಿ ದೇವನಳ್ಳಿ, ಶಿರಸಿ	ಸದಸ್ಯರು
4	ಶ್ರೀ ಗಜಾನನ ಹರಿನಾಯ್ಕ ಕರ್ಕೊಳ್ಳಿ, ಹುಲೇಕರ್	ಸದಸ್ಯರು
5	ಶ್ರೀಮತಿ ಜಯಂತಿ ನಾರಾಯಣಿ ಜೇಡರ ಸಿದ್ದಾಪುರ	ಸದಸ್ಯರು
6	ಶ್ರೀ ವಿಶ್ವನಾಥ ರಂಗನಾಥ್ ಹೆಗಡೆ, ಶೀಗೇಹಳ್ಳಿ, ಶಿರಸಿ	ಸದಸ್ಯರು
7	ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್ ಶಿರಸಿ	ಸದಸ್ಯರು
8	ಶ್ರೀ ದೀಪಕ್ ರೇವಣ್ಕರ್ ಬಾಪೂಜಿನಗರ, ಶಿರಸಿ	ಸದಸ್ಯರು
9	ಅಧ್ಯಕ್ಷರು, ಕೀರ್ತಿ ಸ್ವಸಹಾಯ ಸಂಘ, ಗಣೇಶ್ ನಗರ, ಶಿರಸಿ	ಸದಸ್ಯರು
10	ವ್ಯವಸ್ಥಾಪಕರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ	ಸದಸ್ಯರು
11	ಆರಕ್ಷಕ ಉಪ ನಿರೀಕ್ಷಕರು, ಶಿರಸಿ ಉಪವಿಭಾಗ, ಶಿರಸಿ	ಸದಸ್ಯರು
12	ಕಾರ್ಮಿಕ ಅಧಿಕಾರಿ, ಶಿರಸಿ ಉಪವಿಭಾಗ, ಶಿರಸಿ	ಸದಸ್ಯರು
13	ರೇಷ್ಮೆ ಅಧಿಕಾರಿ, ಶಿರಸಿ ಉಪವಿಭಾಗ, ಶಿರಸಿ	ಸದಸ್ಯರು
14	ಉಪನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಕಾರವಾರ, ಪ್ರತಿನಿಧಿ (ಸಹಾಯಕ ಭೂವಿಜ್ಞಾನಿ) ಉಪವಿಭಾಗ ಶಿರಸಿ	ಸದಸ್ಯರು
15	ತಹಶೀಲ್ದಾರ್ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿ ಶಿರಸಿ ತಾಲ್ಲೂಕು, ಶಿರಸಿ	ಸಂಚಾಲಕರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಎಸ್. ಪ್ರಸನ್ನ ಕುಮಾರ್

ನಿರ್ದೇಶಕರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ

ಯೋಜನೆ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್.173

PERSONNEL AND ADMINISTRATIVE REFORMS SECRETARIAT

NOTIFICATION

No. DPAR 10 PRB 2010, Bangalore, dated:08.03.2011

The draft of the following rules further to amend the Karnataka Governor's Secretariat (Recruitment) Rules, 1995, which the Government of Karnataka proposes to make in exercise of the powers conferred by sub-section (1) of section 3 read with

section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) section 3 of the said Act for the information of all persons likely to be affected thereby and notice is hereby given that the said draft will be taken into consideration after 15 days from the date of its publication in the official Gazette.

Any objection or suggestion, which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Secretary to Government, Department of Personnel and Administrative Reforms, Vidhana Soudha, Bangalore-560 001.

DRAFT RULES

1. Title and commencement.- (1) These rules may be called the Karnataka Governor's Secretariat Services (Recruitment) (Amendment) Rules, 2011.

(2) They shall come into force from the date of their publication in the Official Gazette.

2. Amendment of Schedule.- In the Schedule to the Karnataka Governor's Secretariat Services (Recruitment) Rules, 1995, for the entries relating to the Category of Manager Governor's House-Hold (2050-3950), at Sl.No.10, in columns 2, 3, 4, 5 and 6, the following shall be substituted namely:-

Designation of the Post	**No. of Post**		**Method of Recruitment**	**Minimum Qualification**
	Perma-nent	**Tempo-rary**		
1	**2**	**3**	**4**	**5**
Manager, Governors House-Hold (10,000-18,150)	1	--	By Direct Recruitment or By deputation of a Senior Assistant of the Karnataka Government Secretariat Service Or By appointment on Contract basis **Direct Recruitment:** Notwithstanding anything contained in these rules, the direct recruitment shall be made by the Selection Authority consisting of the following, namely:- 1) The Secretary to Governor - Chairperson 2) The Commissioner, Social Welfare Department or his Nominee not below the rank of a Deputy Director- Member 3) The Director, Backward Classes Department or his nominee not below the rank of a Deputy Director -Member The Selection Authority shall advertise the vacancies in the Official Gazette specifying the number of vacancies to be filled and the classification of vacancies in accordance with the reservation of posts provided by or under any law	**For Direct Recruitment or for appointment on contract basis :** 1) Must have passed Pre University Examination or must possess an equivalent qualification; and 2) Must have experience of not less than three years in House Keeping in any Department of the Government.

Designation of the Post	No. of Post		Method of Recruitment	Minimum Qualification
	Perma-nent	Tempo-rary		
1	2	3	4	5
			or any order, for the time being in force and invite applications from intending candidates. Abstract of such advertisement shall also be published in two daily newspapers having wide circulation in the State of Karnataka of which one shall be in Kannada. Application Form shall be as specified by the Selection Authority and shall be annexed to the notification. The application shall be accompanied by such fee and the mode of payment of fee shall be as specified in the notification by the Selection Authority. The notification shall indicate the age limit and the last date fixed for receipt of application which shall not be less than thirty days from the date on which notification inviting the application is published in the Official Gazette. The Selection Authority shall prepare a merit list of candidates who possess the minimum qualification and experience prescribed for the post. From among the candidates whose names are included in such list, as far as may be, such number of candidates as is equal to five times the number of vacancies notified, shall be eligible to be called for the interview. The Selection Authority shall conduct interview of such candidates to assess their suitability for the post. The maximum marks for interview shall be 10. The marks scored by the candidates shall be notified on the Notice Board of Raj Bhavan on the same day or on the day following the date of interview. The select list shall be prepared on the basis of the marks secured by the candidates in the interview. The Appointing Authority may appoint the candidates whose names are included in the select list in the order in which their names appear in the select list after satisfying itself on such enquiry as may be considered necessary that such candidates are suitable in all respects for such appointment. The inclusion of the names of the candidates in the final select list shall not confer any right of appointment.	

Designation of the Post	No. of Post		Method of Recruitment	Minimum Qualification
	Perma-nent	Tempo-rary		
1	2	3	4	5
			The approval of the Governor shall be obtained before appointment order is issued on the basis of the selection.	

By Order and in the name of the Governor of Karnataka,

PR-179

V.SHIVAKUMAR

Under Secretary to Government,

DPAR (Political).

ಸಹಕಾರ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸಇ 293 ಎಂಆರ್‌ಇ 2008, ಬೆಂಗಳೂರು, ದಿನಾಂಕ: 23ನೇ ಮಾರ್ಚ್, 2011

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಸಇ 293 ಎಂಆರ್‌ಇ 2008 ದಿನಾಂಕ: 11/03/2011 ರಲ್ಲಿನ "ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1986 ರ" ಕಾಯ್ದೆಯಡಿ ಘೋಷಿಸಲಾಗಿರುವ ಕೃಷಿ ಉತ್ಪನ್ನಗಳಲ್ಲಿ ಮರ ಮುಟ್ಟುಗಳನ್ನು (Wood) ಅಧಿಸೂಚಿತ ಸಾಮಗ್ರಿಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ ದಿನಾಂಕ: 03/03/2011 ರ ಕರ್ನಾಟಕ ರಾಜ್ಯಪತ್ರದ ಭಾಗ–4ಎ ರಲ್ಲಿ ಪ್ರಕಟಿಸಲಾಗಿರುವ "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 289 ಎಂಆರ್‌ಇ 2007 ದಿನಾಂಕ: 24/02/2011" ಎಂಬುದರ ಬದಲಾಗಿ "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 293 ಎಂಆರ್‌ಇ 2008 ದಿನಾಂಕ: 24/02/2011" ಎಂದು ಎಲ್ಲಾ ಸಂದರ್ಭದಲ್ಲಿಯೂ ತಿದ್ದಿಕೊಂಡು ಓದಿಕೊಳ್ಳತಕ್ಕದು". ಎಂಬುದರ ಬದಲಾಗಿ

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಸಇ 293 ಎಂಆರ್‌ಇ 2008 ದಿನಾಂಕ: 11/03/2011 ರಲ್ಲಿನ "ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಾಯ್ದೆಯಡಿ ಘೋಷಿಸಲಾಗಿರುವ ಕೃಷಿ ಉತ್ಪನ್ನಗಳಲ್ಲಿ ಮರ ಮುಟ್ಟುಗಳನ್ನು (Wood) ಅಧಿಸೂಚಿತ ಸಾಮಗ್ರಿಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ ದಿನಾಂಕ: 03/03/2011 ರ ಕರ್ನಾಟಕ ರಾಜ್ಯಪತ್ರದ ಭಾಗ–4ಎ ರಲ್ಲಿ ಪ್ರಕಟಿಸಲಾಗಿರುವ "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 289 ಎಂಆರ್‌ಇ 2007 ದಿನಾಂಕ: 24/02/2011" ಎಂಬುದರ ಬದಲಾಗಿ "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 293 ಎಂಆರ್‌ಇ 2008 ದಿನಾಂಕ: 24/02/2011" ಎಂದು ಎಲ್ಲಾ ಸಂದರ್ಭದಲ್ಲಿಯೂ ತಿದ್ದಿಕೊಂಡು ಓದಿಕೊಳ್ಳತಕ್ಕದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.212

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ–1,

ಸಹಕಾರ ಇಲಾಖೆ.

HOME SECRETARIAT

NOTIFICATION

No.HD 08 PCE 2008, Bengaluru, Dated:31st January, 2011

Whereas, in exercise of the powers conferred by sub section (1) of section 3 of the Commissions of Inquiry Act, 1952 (central Act LX of 1952) the Government of Karnataka appointed a Commission of Inquiry by appointing Hon'ble Justice B.K. Somashekhara, a retired Judge of High Court of Karnataka and Andhra Pradesh for a period of three months to inquire into the incidents of attacks on certain places of worship in Dakshina Kannada and other districts of Karnataka in the month of September, 2008, vide the Notification of even number dated: 19.09.2008.

Whereas, the term of the Commission was periodically extended on the requests of the Commission, are as follows:

Sl. No.	Notification	Date of Issue	Period
1.	HD 08 PCE 2008 (P)	18.02.2008	From 18.12.2008 to 18.03.2009 (Three months)
2.	HD 08 PCE 2008	17.03.2009	From 18.03.2009 to 18.06.2009 (Three months)
3.	HD 08 PCE 2008 (P)	16.06.2009	From 19.06.2009 to 18.12.2009 (Six months)
4.	HD 08 PCE 2008	09.12.2009	From 19.12.2009 to 31.01.2010
5.	HD 08 PCE 2008	29.12.2009	From 01.02.2010 to 31.03.2010 (Two months)
6.	HD 08 PCE 2008	31.03.2010	From 01.04.2010 to 30.04.2010 (One month)

Sl. No.	Notification	Date of Issue	Period
7.	HD 08 PCE 2008	29.04.2010	From 01.05.2010 to 31.07.2010 (Three months)
8.	HD 08 PCE 2008	31.07.2010	From 31.07.2010 to 31.08.2010 (One month)
9.	HD 08 PCE 2008 (P)	31.08.2010	From 01.09.2010 to 31.10.2010 (Two months)
10.	HD 08 PCE 2008	01.12.2010	From 01.11.2010 to 31.12.2010 (Two months)

AND NOW, whereas, the Secretary to the Hon'ble Commission of Inquiry vide letter bearing No.JBKSCOI/3/2011, Dated:04.01.2011 has informed the Government that the final report of the Inquiry is in the final stages of preparation and same will be submitted to the Govt., shortly, after its completion and getting it translated into Kannada. As such the Hon'ble Commission has requested the Government to extend the term of its office for further period of one month from Jan, 01.2011.

AND NOW, WHEREAS, on the request of the Commission the matter has been examined. In exercise of the powers conferred in it, the Government of Karnataka is pleased to extend the term of the Commission for the last time for a further period from 01.01.2011 to 31.01.2011.

By Order and in the name of the Governor of Karnataka,

K.C. SIDDAPPA

PR-74

Under Secretary to Government,

Home Department (Law and order, COFEPOSA and Prosecution)

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 150 ಎಂಆರ್‌ಇ (4) 2010, ಬೆಂಗಳೂರು, ದಿನಾಂಕ:5ನೇ ಮಾರ್ಚ್, 2011

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10(1)(i)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 150 ಎಂಆರ್‌ಇ 2010 ದಿನಾಂಕ:05.03.2011 ರಲ್ಲಿ ಸ್ಥಾಪಿಸಲಾಗಿರುವ ಹೊಳಲ್ಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ:

ಕ್ರಮ ಸಂಖ್ಯೆ	ಶ್ರೀ/ಶ್ರೀಮತಿ	
1.	ಶ್ರೀ ಬಸವಂತಪ್ಪ ತಂದೆ ಮಲ್ಲಪ್ಪ, ಮುದುಕದೂರು	ಸದಸ್ಯರು
2.	ಶ್ರೀಮತಿ ಶಶಿಕಲಾ ಕೋಂ ಮಹೇಶ್ವರಪ್ಪ, ನವಣೆಕೆರೆ	ಸದಸ್ಯರು
3.	ಶ್ರೀ ರಾಜಪ್ಪ ತಂದೆ ರಂಗಪ್ಪ, ಹೆಚ್.ಡಿ. ಪುರ	ಸದಸ್ಯರು
4.	ಶ್ರೀ ಹಾಲೇಶಪ್ಪ ತಂದೆ ದ್ಯಾಮಪ್ಪ, ನಲ್ಲಿಕಟ್ಟೆ	ಸದಸ್ಯರು
5.	ಶ್ರೀಮತಿ ಕಮಲ ಕೋಂ ವೆಂಕಟೇಶನಾಯಕ, ಗುಲಗಂಜಿಹಟ್ಟಿ	ಸದಸ್ಯರು
6.	ಶ್ರೀ ಎಂ.ಸಿ. ಲಿಂಗಪ್ಪ ತಂದೆ ಚನ್ನಬಸಪ್ಪ, ಚಿತ್ರಹಳ್ಳಿ	ಸದಸ್ಯರು
7.	ಶ್ರೀ ಬಸವನಗೌಡ ತಂದೆ ಪಟೇಲ್ ಪರಮೇಶ್ವರಪ್ಪ, ಊಡಿಗೆರೆ	ಸದಸ್ಯರು
8.	ಶ್ರೀ ಗೌರಿ ರಾಜಕುಮಾರ ತಂದೆ ಬಯ್ಯಣ್ಣ, ಕೊಡಗಹಟ್ಟಿ	ಸದಸ್ಯರು
9.	ಶ್ರೀ ದೇವರಾಜ ತಂದೆ ತಿಮ್ಮಪ್ಪ, ಚಿತ್ರಹಳ್ಳಿ–ಗೊಲ್ಲರಹಟ್ಟಿ	ಸದಸ್ಯರು
10.	ಶ್ರೀ ಚಂದ್ರಪ್ಪ ತಂದೆ ತಿಮ್ಮಪ್ಪ, ಉಪ್ಪರಿಗೇನಹಳ್ಳಿ	ಸದಸ್ಯರು
11.	ಶ್ರೀ ಮರಳಸಿದ್ದಪ್ಪ ತಂದೆ ಶಿವಲಿಂಗಪ್ಪ, ಶಿವಪುರ	ಸದಸ್ಯರು

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ, 1966ರ ಕಲಂ 10(2)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪ್ರಕರಣ 10(1)(i) ರಡಿಯಲ್ಲಿ ಮೇಲಿನಂತೆ ನಾಮನಿರ್ದೇಶನಗೊಂಡಿರುವ ಸದಸ್ಯರುಗಳ ಪೈಕಿ ಶ್ರೀ ಬಸವಂತಪ್ಪ ತಂದೆ ಮಲ್ಲಪ್ಪ, ಮುದುಕದೂರು ಇವರನ್ನು ಅಧ್ಯಕ್ಷರನ್ನಾಗಿ ಮತ್ತು ಶ್ರೀಮತಿ ಶಶಿಕಲಾ ಕೋಂ ಮಹೇಶ್ವರಪ್ಪ, ನವಣೆಕೆರೆ ಇವರನ್ನು ಸದರಿ ಸಮಿತಿಯ ಉಪಾಧ್ಯಕ್ಷರನ್ನಾಗಿ ನಾಮಕರಣ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.196

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ